**ನಿರ್ವಹಣೆ:** ಕೀಟಗಳ ಬಾಧೆ ಕಂಡು ಬಂದಲ್ಲಿ 1.7 ಮಿ.ಲೀ. ಡೈಮಿಥೋಯೇಟ್ 30 ಇ.ಸಿ. ಅಥವಾ 0.5 ಮಿ.ಲೀ. ಫಾಸ್ಫಾಮಿಡಾನ್ 85 ಡಬ್ಲ್ಯೂ.ಎಸ್.ಸಿ. ಅಥವಾ 1 ಮಿ.ಲೀ. ಮೀಥೈಲ್ ಪ್ಯಾರಾಥಿಯಾನ್ 50 ಇ.ಸಿ. 1 ಲೀಟರ್ ನೀರಿನೊಡನೆ ಬೆರೆಸಿ ಸಿಂಪಡಿಸಬೇಕು

2. **ಕಾಯಿ ಕೊರಕ:** ಮರಿ ಹುಳುಗಳು ಕಾಯಿಗಳನ್ನು ಕೊರೆದು ಬೀಜಗಳನ್ನು ತಿನ್ನುತ್ತವೆ ಮತ್ತು ಹುಳು ಬಿದ್ದ ಕಾಯಿಗಳ ಮೇಲೆ ರಂಧ್ರವಿರುತ್ತವೆ.

**ನಿರ್ವಹಣೆ:** ಕಾಯಿ ಕೊರೆಯುವ ಹುಳುವಿನ ಬಾಧೆ ಕಂಡು ಬಂದಲ್ಲಿ ಪ್ರತಿ ಹೆಕ್ಟೇರಿಗೆ 20 ಕಿ.ಗ್ರಾಂ ಶೇ. 5ರ ಮೆಲಾಥಿಯಾನ್ ಪುಡಿ ಉದುರಿಸಬೇಕು ಅಥವಾ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.

### ರೋಗಗಳು

1. **ನಂಜು ರೋಗ:** ಹಸಿರು ಮಿಶ್ರಿತ ಹಳದಿ ಬಣ್ಣದಿಂದ ಕೂಡಿದ ಭಾಗಗಳನ್ನು ಎಲೆಗಳಲ್ಲಿ ಕಾಣಬಹುದು. ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

**ನಿರ್ವಹಣೆ:** ರೋಗಪೀಡಿತ ಗಿಡಗಳನ್ನು ಕಿತ್ತು ನಾಶಪಡಿಸಬೇಕು. ರೋಗ ಹರಡುವುದನ್ನು ತಡೆಯಲು ಪ್ರತಿ ಲೀ. ನೀರಿಗೆ 1.7 ಮಿ.ಲೀ. ಡೈಮಿಥೋಯೇಟ್ ಬೆರೆಸಿ ಸಿಂಪಡಿಸಬೇಕು. ಬೂದಿ ರೋಗ ಮತ್ತು ಎಲೆ ಚುಕ್ಕೆ ರೋಗಗಳು ಕಂಡು ಬಂದಲ್ಲಿ 3 ಗ್ರಾಂ. ಶೇ. 80ರ ನೀರಿನಲ್ಲಿ ಕರಗುವ ಗಂಧಕ ಅಥವಾ 2 ಗ್ರಾಂ. ಮ್ಯಾಂಕೋಜೆಬ್ ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂ.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಬಿತ್ತಿದ 4–5 ವಾರಗಳ ನಂತರ ಸಿಂಪಡಿಸಬೇಕು.

2. **ಎಲೆ ಚುಕ್ಕೆ ರೋಗ:** ತಿಳಿ ಹಳದಿ ಬಣ್ಣದ ವಕ್ರಾಕಾರದ ಅಥವಾ ವೃತ್ತಾಕಾರದ ಚುಕ್ಕೆಗಳು ಎಲೆ ಮತ್ತು ಕಾಯಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ಚುಕ್ಕೆಯ ಒಳ ಭಾಗವು ಕಂದು ಬಣ್ಣದಿಂದ ಕೂಡಿರುತ್ತದೆ. ರೋಗದ ತೀವ್ರತೆ ಜಾಸ್ತಿಯಾದಾಗ ಎಲೆಗಳು ಒಣಗಿದ ಹುಲ್ಲಿನಂತಿದ್ದು ಆಮೇಲೆ ಒಣಗುತ್ತವೆ.

**ನಿರ್ವಹಣೆ:** ದುಂಡಾಣು ಎಲೆ ಚುಕ್ಕೆ ರೋಗ ಕಂಡು ಬಂದಲ್ಲಿ 0.5 ಗ್ರಾಂ ಅಗ್ರಿಮೈಸಿನ್ 100 ಅನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.






ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ.
ಕಂಕನಾಡಿ, ಮಂಗಳೂರು – 575 002


# ತರಕಾರಿ ಅಲಸಂದಿ ಬೆಳೆಯ ಬೇಸಾಯ ಕ್ರಮಗಳು






**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ**
**ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು,**
**ಕಂಕನಾಡಿ ಅಂಚೆ, ಮಂಗಳೂರು,**
**ದಕ್ಷಿಣ ಕನ್ನಡ – 575002**
www.kvkdk.org, kvkdk@rediffmail.com
0824–2431872

ತರಕಾರಿ ಅಲಸಂದೆಯ ಎಳೆಯ ಕಾಯಿಗಳನ್ನು ತರಕಾರಿಯಾಗಿ ಉಪಯೋಗಿಸಲಾಗುತ್ತಿದೆ. ಇದರ ಕಾಯಿಗಳು ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕ, 'ಬಿ' ಅನ್ನಾಂಗ ಮತ್ತು ಲವಣಾಂಶಗಳನ್ನು ಹೊಂದಿರುತ್ತವೆ.

ಈ ಬೆಳೆಯನ್ನು ಹೆಚ್ಚಾಗಿ ನೀರು ಬಸಿದು ಹೋಗುವಂತಹ ಎಲ್ಲಾ ತರಹದ ಮಣ್ಣುಗಳಲ್ಲಿ ಬೆಳೆಯಬಹುದು. ಅಲ್ಲದೆ ವರ್ಷದಲ್ಲಿ ಎರಡು ಹಂಗಾಮಿನಲ್ಲಿ ಮೇ–ಜುಲೈ ಮತ್ತು ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಬೆಳೆಬಹುದು. ಗುಡ್ಡಗಾಡು ಪ್ರದೇಶಗಳಲ್ಲಿ ಜನವರಿ–ಫೆಬ್ರವರಿ ಸೂಕ್ತ ಕಾಲ. ಕರಾವಳಿ ಪ್ರದೇಶದಲ್ಲಿ ಬತ್ತದ ಕಟಾವಿನ ನಂತರ ಗದ್ದೆಗಳಲ್ಲಿ ಈ ಬೆಳೆಯನ್ನು ಬೆಳೆಯಬಹುದು



**ತಳಿಗಳು:** ಕರಾವಳಿ ಪ್ರದೇಶಕ್ಕೆ ಸೂಕ್ತವಾದ ತಳಿಯೆಂದರೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರುರವರು ಅಭಿವೃದ್ಧಿ ಪಡಿಸಿರುವ ಅರ್ಕಾ ಮಂಗಳ ತಳಿ.

ಈ ತಳಿಯು ಹಬ್ಬುವ ಬಳ್ಳಿ ತಳಿಯಾಗಿದ್ದು ಬಳ್ಳಿಗಳು 10 ಅಡಿಯವರೆಗೆ ಎತ್ತರ ಬೆಳೆಯುತ್ತವೆ ಹಾಗೂ ಚಪ್ಪರದ ಮೇಲೆ ಹಬ್ಬಿಸಬೇಕು. ಬಿತ್ತನೆ ಮಾಡಿದ 60 ದಿನಗಳಲ್ಲಿ ಹಸಿರು ಕಾಯಿಗಳು ಕಟಾವಿಗೆ ಬರುತ್ತವೆ ಹಾಗೂ 110 ದಿನಗಳವರೆಗೆ ಪ್ರತಿ ವಾರಕ್ಕೊಮ್ಮೆ ಕಟಾವು ಮಾಡಬಹುದು. ಕಾಯಿಗಳು ನೀಳವಾಗಿ ದಟ್ಟ ಹಸಿರಾಗಿದ್ದು ನಾರು ರಹಿತವಾಗಿ 70–75 ಸೆಂ. ಮೀ. ನಷ್ಟು ಉದ್ದವಿರುತ್ತವೆ. ಪ್ರತಿ ಎಕರೆಗೆ ಸುಮಾರು 10 ಟನ್ ಇಳುವರಿಯನ್ನು ಕೊಡುತ್ತದೆ.

**ಬೇಸಾಯ ಸಾಮಗ್ರಿಗಳು ಪ್ರತಿ ಎಕರೆಗೆ**

| ಬಿತ್ತನೆಯ ಬೀಜ (ಕಿ. ಗ್ರಾಂ) | ಕೊಟ್ಟಿಗೆ/ ಕಾಂಪೋಸ್ಟ್ ಗೊಬ್ಬರ (ಟನ್) | ರಾಸಾಯನಿಕ ಗೊಬ್ಬರಗಳು (ಕಿ. ಗ್ರಾಂ) | | | |
|---|---|---|---|---|---|
| | | ಸಾರಜನಕ | ರಂಜಕ | ಪೊಟ್ಯಾಷ್ | ರೈಜೋಬಿಯಂ ಜೀವಾಣು ಗೊಬ್ಬರ |
| ಬಳ್ಳಿ ತಳಿಗಳಿಗೆ– 1.2 | 10 | 10 | 30 | 24 | 150 ಗ್ರಾಂ. |

**ಬಿತ್ತನೆ:** ಭೂಮಿಯನ್ನು ಹದಮಾಡಿದ ನಂತರ 1.5 ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಿ, ಶಿಫಾರಸ್ಸು ಮಾಡಿದ ಪೂರ್ಣ ಪ್ರಮಾಣದ ಕೊಟ್ಟಿಗೆ ಗೊಬ್ಬರ ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ರಸಗೊಬ್ಬರಗಳನ್ನು ಸಾಲಿನಲ್ಲಿ ಹಾಕಿ ಮಣ್ಣಿಗೆ ಸೇರಿಸಿ, ಮಳೆಗಾಲದ ಬೆಳೆಗೆ ಕರಾವಳಿ ಪ್ರದೇಶಗಳಲ್ಲಿ ಶೇ. 50 ರಷ್ಟು ಸಾರಜನಕ, ಪೂರ್ಣ ಪ್ರಮಾಣದ ರಂಜಕ ಮತ್ತು ಪೊಟ್ಯಾಷ್ ಮಣ್ಣಿಗೆ ಸೇರಿಸಬೇಕು ಬಿತ್ತನೆಗಿಂತ ಮೊದಲು ಬೀಜಗಳನ್ನು ರೈಜೋಬಿಯಂ ಅಣುಜೀವಿ ಗೊಬ್ಬರದಿಂದ ಬೀಜೋಪಚಾರ ಮಾಡಿ ¾ ಅಡಿ ಅಂತರವಿರುವಂತೆ ಬಿತ್ತಿ ನೀರು ಹಾಯಿಸಬೇಕು.

**ಬೇಸಾಯ ಸಾಮಗ್ರಿಗಳು ಪ್ರತಿ ಎಕರೆಗೆ**

**ನೀರಾವರಿ ಮತ್ತು ಅಂತರ ಬೇಸಾಯ:** ಮಣ್ಣು ಮತ್ತು ಹವಾಗುಣಕ್ಕನುಸಾರವಾಗಿ 3–4 ದಿನಗಳಿಗೊಮ್ಮೆ ನೀರನ್ನು ಹಾಯಿಸಬೇಕು ಹನಿ ನೀರಾವರಿ ಅಳವಡಿಸಿದಲ್ಲಿ ಪ್ರತಿ ದಿನ 20–40 ನಿಮಿಷ ನೀರನ್ನು ಕೊಡುವುದು.

ಲಘು ಪೋಷಕಾಂಶಗಳ ನಿರ್ವಹಣೆಗೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರುರವರು ಅಭಿವೃದ್ಧಿಪಡಿಸಿರುವ **"ತರಕಾರಿ ಸ್ಪೆಷಲ್ ಲಘು ಪೋಷಕಾಂಶವನ್ನು"** ಪ್ರತಿ ಲೀಟರಿಗೆ 2 ಗ್ರಾಂ. ನಂತೆ ಮಿಶ್ರಮಾಡಿ ನಾಟಿ ಮಾಡಿದ 45, 60 ಮತ್ತು 75 ದಿನಗಳಲ್ಲಿ ಮೂರು ಬಾರಿ ಸಿಂಪರಣೆ ಮಾಡುವುದು.

**ಆಸರೆ ಒದಗಿಸುವುದು:** ಹಬ್ಬುವ ತಳಿಯ ಗಿಡಗಳನ್ನು ಹಬ್ಬಿಸಲು ಸಾಲಿನಲ್ಲಿ 9 ಅಡಿ ಎತ್ತರದ ಬಿದಿರು, ಸರ್ವೆ ಅಥವಾ ನೀಲಗಿರಿ ಕೋಲುಗಳನ್ನು ಪ್ರತಿ 6 ರಿಂದ 8 ಅಡಿಗೊಂದರಂತೆ ನೆಟ್ಟು ಪ್ಲಾಸ್ಟಿಕ್ ವೈರ್ / ಜಿಐ ತಂತಿಯಿಂದ ಅಡ್ಡಲಾಗಿ ಕಟ್ಟಿ ನಂತರ ಗಿಡದ ರೆಂಬೆಗಳನ್ನು ಹಂತಹಂತವಾಗಿ ಗೋಣಿದಾರದಿಂದ ಮೇಲೆ ತಂತಿಗೆ / ವೈರ್‌ಗೆ ಕಟ್ಟಿ ಆಧಾರ ಒದಗಿಸಬೇಕು. ಇದರಿಂದ ಗಿಡಗಳಿಗೆ ರಕ್ಷಣೆ ದೊರೆಯುವುದರ ಜೊತೆಗೆ ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿ ಕೊಯ್ಲು ಮಾಡಲು ಸುಲಭವಾಗುತ್ತದೆ. ಮತ್ತೊಂದು ಪದ್ಧತಿಯೆಂದರೆ, 6 ಅಡಿ ಎತ್ತರದ ಮತ್ತು 4 ಅಡಿ ಅಗಲದ ಜಿ.ಐ. ವೈರ್‌ಮೆಶ್‌ಗಳನ್ನು ಸಸಿ ನಾಟಿ ಮಾಡಿದ 20 ದಿನಗಳ ನಂತರ ಎರಡು ಕಂಬಗಳ ಮಧ್ಯ ಒಂದಕ್ಕೊಂದು ತಂತಿಯನ್ನು ಕಟ್ಟಿ ಬಳ್ಳಿಗಳನ್ನು ವೈರ್‌ಮೆಶ್ ಮೇಲೆ ಹಬ್ಬುವಂತೆ ನೋಡಿಕೊಳ್ಳಬೇಕು. ಈ ಪದ್ಧತಿಯಿಂದ ಕೂಲಿಯಾಳುಗಳ ಸಂಖ್ಯೆ ಕಡಿಮೆ ಬೇಕಾಗುತ್ತದೆ.

**ಕೊಯ್ಲು ಮತ್ತು ಇಳುವರಿ:** ಎಳೆಯ ಹಸಿರು ಕಾಯಿಗಳನ್ನು ಮಾರಾಟದ ಸಲುವಾಗಿ ಕೀಳಬೇಕು. ಕಾಯಿಗಳು ಬಲಿತು ನಾರಿನಾಂಶ ಹೆಚ್ಚಾಗುವ ಮೊದಲೇ ಕೀಳಬೇಕು. ಪ್ರತಿ ಎಕರೆಗೆ 3.2–4 ಟನ್ ಹಸಿರು ಕಾಯಿಗಳನ್ನು ಪಡೆಯಬಹುದು. ಹಬ್ಬುವ ತಳಿಗಳಿಂದ ಪ್ರತಿ ಎಕರೆಗೆ 6 ಟನ್ ಇಳುವರಿ ಪಡೆಯಬಹುದು.

**ಸಸ್ಯ ಸಂರಕ್ಷಣಾ ಕ್ರಮಗಳು**

**ಕೀಟಗಳು**

1. **ಸಸ್ಯ ಹೇನು:** ಹೇನುಗಳು ಗುಂಪಿನಲ್ಲಿದ್ದು ಸುಳಿ, ಚಿಗುರೆಲೆ ಮತ್ತು ಎಳೆ ಕಾಯಿಗಳಿಂದ ರಸ ಹೀರುತ್ತವೆ. ಹುಳುಬಿದ್ದ ಗಿಡಗಳ ಎಲೆಗಳ ಮೇಲೆ ಕಪ್ಪು ಬೂಷ್ಟು ಬೆಳೆದು ಕೊಂಡಿರುತ್ತದೆ.